ಅಪರೂಪದ ಕಣಿವಾದಕ

ವಿಷ್ಣು ಕಂಚಗಾರ



ಡಾ॥ ರಾಜಶೇಖರ ಇಚ್ಚಂಗಿ

ಜನಪ್ರಿಯ ಜಾನಪದ ಪುಸ್ತಕ ಮಾಲೆ-೬೪

ಅಪರೂಪದ ಕಣಿವಾದಕ

ವಿಷ್ಣು ಕಂಚಗಾರ

ವ್ಯಕ್ತಿ ಪರಿಚಯ

ಡಾ॥ ರಾಜಶೇಖರ ಇಚ್ಚಂಗಿ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

VISHNU KANCHAGARA - **A Pen Portrait** - By **Dr. Rajashekhara Ichangi.** Pulished by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054,

Phone : 080-23605033. Janapada Loka : 27201143

ಪ್ರಥಮ ಮುದ್ರಣ : ೨೦೧೧ ಪುಟಗಳು : ೩೨

ಪ್ರತಿಗಳು : ೧೦೦೦

ಬೆಲೆ : ರೂ. ೧೦ (ಹತ್ತು ರೂಪಾಯಿಗಳು)

ಗ್ರಂಥ ಪ್ರಕಟಣಾ ಸಲಹಾ ಸಮಿತಿ

ನಾಡೋಜ ಡಾ|| ಜಿ. ನಾರಾಯಣ	ಅಧ್ಯಕ್ಷರು
ಶ್ರೀ ಟಿ. ತಿಮ್ಮೇಗೌಡ	ಸದಸ್ಯರು
ಶ್ರೀಮತಿ ಇಂದಿರಾ ಬಾಲಕೃಷ್ಣ	ಸದಸ್ಯರು
ಶ್ರೀ ಗೊ. ರು. ಚನ್ನಬಸಪ್ಪ	ಸದಸ್ಯರು
ನಾಡೋಜ ಡಾ|| ಸಿದ್ಧಲಿಂಗಯ್ಯ	ಸದಸ್ಯರು
ಡಾ|| ಎಂ. ಎ. ಜಯಚಂದ್ರ	ಸದಸ್ಯರು
ಪ್ರೊ. ಡಿ. ಲಿಂಗಯ್ಯ	ಸಂಪಾದಕರು
ಡಾ. ಚಕ್ಕೆರೆ ಶಿವಶಂಕರ್	ಕಾರ್ಯದರ್ಶಿ-ಸಂಚಾಲಕರು

ಮುದ್ರಕರು :

ಚಂದನ ಪ್ರಿಂಟರ್ಸ್
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ- ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ಹದಿನೈದು ರೂಪಾಯಿಗಳ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಖ್ಯಾತ ಲೇಖಕರಾದ ಡಾ. **ರಾಜಶೇಖರ ಇಚ್ಚಂಗಿ** ಅವರು ಅಪರೂಪದ ಕಣಿವಾದಕ **'ವಿಷ್ಣು ಕಂಚಗಾರ'** ಅವರನ್ನು ಕುರಿತು ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

೦೪-೦೨-೨೦೧೧
ಬೆಂಗಳೂರು

ಅಪರೂಪದ ಕಣಿವಾದಕ–ವಿಷ್ಣು ಕಂಚಗಾರ

ಪ್ರಸ್ತಾವನೆ

ಡಾ. ಎಮ್. ಎಸ್. ಲಠ್ಠೆಯವರು 'ಜನಪದ ಕವಿ ಚರಿತ್ರೆ' ಬರೆದು ಮುಂದಿನ ಪೀಳಿಗೆಗೆ ಅವರ ನೆನಪನ್ನು ಉಳಿಸಿಕೊಟ್ಟಿದ್ದಾರೆ. ಪ್ರಸ್ತುತ ಪ್ರಸ್ತಾವನೆಯಲ್ಲಿ ರಾಯಬಾಗ ತಾಲ್ಲೂಕಿಗೆ ಮಾತ್ರ ಸಂಬಂಧಿಸಿದ ಜನಪದ ಸಾಹಿತ್ಯದ ಪಕ್ಷಿನೋಟವನ್ನು ಕಾಣಬಹುದು.

ರಾಯಬಾಗವು ತಾಲ್ಲೂಕಿನ ಮುಖ್ಯ ಕೇಂದ್ರವಾಗಿ ಪ್ರಾಚೀನ ಕಾಲದಿಂದಲೂ ಸುಪ್ರಸಿದ್ಧ ಅಗ್ರಹಾರವಾಗಿತ್ತಲ್ಲದೆ ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ವೇದೋಪನಿಷತ್ತು ಕಲಿಯುತ್ತಿದ್ದರೆಂಬ ಉಲ್ಲೇಖವು ಶಾಸನಗಳಿಂದ ತಿಳಿದು ಬರುತ್ತದೆ.

ಸವದತ್ತಿಯ ರಟ್ಟರೆಂದೇ ಪ್ರಸಿದ್ಧರಾಗಿದ್ದ 'ರಟ್ಟ' ಅರಸರು ಕ್ರಿ. ಶ. ೯೩೦ ರಿಂದ ಕ್ರಿ. ಶ. ೧೨೩೦ರವರೆಗೆ ಕೂಹೂಂಡಿ ಮಂಡಳವನ್ನು ಆಳಿದರು. ಈ ಅವಧಿಯನ್ನು ಕುಹೂಂಡಿ ಮೂಸಾನಿರಿ ನಾಡಿನ ಸುವರ್ಣಯುಗವೆಂದು ಹೇಳಬಹುದು ಅನೇಕ ಕವಿಗಳು ರಟ್ಟರ ಆಶ್ರಯದಾತರಾಗಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಇಂತಹ ಕೂಹೂಂಡಿ ಮಂಡಳದ ಒಂದು ಪ್ರಮುಖ ಸ್ಥಳವಾದ ಪೂವಿನಬಾಗೆ(ರಾಯುಬಾಗ)ಯಲ್ಲಿದ್ದುಕೊಂಡು ಕನ್ನಡದಲ್ಲಿ ಗಣಿತಶಾಸ್ತ್ರ ಗ್ರಂಥಗಳನ್ನು ಬರೆದ ರಾಜಾದಿತ್ಯನೇ ರಾಯಬಾಗ ತಾಲ್ಲೂಕಿನ ಮೊದಲ ಕವಿ.

ರಾಜಾದಿತ್ಯನ ನಂತರ ಸಾಹಿತ್ಯ ಕೃಷಿ ಕೈಗೊಂಡ ಸುಪ್ರಸಿದ್ಧ ಜನಪದ ಕವಿ ಅಲಭ್ಯೈರಿಯೇ. ರಾಯಬಾಗ ತಾಲ್ಲೂಕಿನ ಹಾರೂಗೇರಿಯಲ್ಲಿ ಕ್ರಿ.ಶ. ೧೮೮೫-೯೦ರಲ್ಲಿ ಧರೆಪ್ಪ ಹಾಗೂ ರಾಮಪ್ಪ ದಂಪತಿಗಳ ಮಗನಾದ ಈತನ ಹೆಸರು ಅಲ್ಲಪ್ಪ ಸುಬ್ಬಣ್ಣವರ ಎಂದು ತಿಳಿದು ಬರುತ್ತದೆ.

ಶಾಲೆಯ ಕಟ್ಟೆಯನ್ನೇ ಏರದ ಈತ ಸಮಾಜದಿಂದ ಕಲಿತದ್ದು ಹೆಚ್ಚು. ಮಿತ್ರರ ಒಡನಾಟದಲ್ಲಿ ಕನ್ನಡ, ಮರಾಠಿ ಅರಿತು ಕನ್ನಡ, ಮರಾಠಿ, ಮುಸಲ್ಮಾನಿ ಹಾಗೂ ತೆಲುಗು ಭಾಷೆಗಳಲ್ಲಿ ಭಜನೆ, ಶಾಹಿರಿ, ಲಾವಣಿ, ರಿವಾಯತ್, ಡೊಳ್ಳಿನ ಪದ ಹಾಗೂ ಬಯಲಾಟಗಳನ್ನು ಬರೆದು ಜನಪದ ಸಾಹಿತ್ಯದ ದಿಗ್ಗಜನೆನಿಸಿಕೊಂಡಿದ್ದಾನೆ. ೧. ಹಾಲುಮತ ಚರಿತ್ರೆಯ ಗೀತ ೨. ಕಲಿಗಿ ತುರಾಯಿ ೩. ಕರಬಲಾ ಕದನ ಗೀತೆ ೪. ಆಧ್ಯಾತ್ಮಿಕ ಜಾನಭೋದಿ ಗೀತ ೫. ವೈರಾಗ್ಯ ವಿಜಯ(ಬಯಲಾಟ) ಲಲಿತರೇಖೆ (ಹಣೆಬರಹ ಅಪೂರ್ಣ) ಮುಂತಾದ ಗ್ರಂಥಗಳನ್ನು ಬರೆದಿರುವನಲ್ಲದೆ ೧೫೦೦ಕ್ಕಿಂತಲೂ ಅಧಿಕ ಗೀತೆಗಳನ್ನು ಬರೆದು ಜನಮನದಲ್ಲಿ 'ವರಕವಿ' ಎಂದೇ ಪ್ರಸಿದ್ಧಿ ಪಡೆದಿದ್ದಾನೆ.

ಅಲಭ್ಯೈರಿಯ ಸಮಕಾಲೀನರಾದ ಜೂಲಪುರದ ರಾಚೋಟಿ ಪರಮಾನಂದವಾಡಿಯ ಕಲಶಸಿದ್ಧ, ಮುಗುಳಕೋಡದ ರಾಚಯ್ಯ, ದಿಗ್ಗೇವಾಡಿಯ ಬಾಬಾಜಿ ಜಮಾದಾರ ಮುಂತಾದ ಜನಪದ ಕವಿಗಳ ಸಾಹಿತ್ಯ ಅವಿಸ್ಮರಣೀಯವಾದದ್ದು. ಬಾಬಾಜಿ ನೂರಾರು ಡೊಳ್ಳಿನ ಹಾಗೂ ಗೀಗೀಪದಗಳನ್ನು ಕನ್ನಡ ಭಾಷಯಲ್ಲಿಯೇ ಬರೆದು ಲಿಪಿಗೆ ಮಾತ್ರ ಮರಾಠಿಯನ್ನು ಬಳಸಿದ್ದು ಮೆಚ್ಚುವಂತಹದ್ದು.

ಈ ಹಂತವನ್ನು ದಾಟಿ ಸ್ವಲ್ಪ ಮುಂದೆ ಬಂದರೆ ರಾಯಬಾಗ

ತಾಲ್ಲೂಕಿಗೆ ಸಾಹಿತ್ಯ ಜ್ಯೋತಿಯಾಗಿ ಬಂದವರು ಪ್ರಾ. ಜ್ಯೋತಿ ಹೊಸೂರ ಅವರು. ನಾಡಿನ ಧೀಮಂತ ಲೇಖಕರಾಗಿ. ಜಾನಪದ ತಜ್ಞರಾಗಿ, ಗಡಿಯ ಗುಡಿಗೆ ಕಳಸವಿಟ್ಟಿದ್ದಾರೆ. ೧೯೭೭ರಲ್ಲಿ ಕಾಲಗತಿ ಪತ್ರಿಕೆ ಆರಂಭಿಸುವ ಮೂಲಕ ರಾಯಬಾಗ ತಾಲ್ಲೂಕಿಗೆ ಹೊಸರೂಪವನ್ನೇ ನೀಡಿದವರು ಕಾಲಗತಿ ಹಾಗೂ ಜಾನಪದ ಮಂಟಪಗಳನ್ನು ಕಟ್ಟಿ ಜನಪದ ಸಾಹಿತ್ಯದ ಸಂಗ್ರಹ, ಸಂಪಾದನೆ, ಸಂಶೋಧನೆ ಹಾಗೂ ಪ್ರಕಟಣೆ ಕೈಗೊಂಡು ೨೦ಕ್ಕಿಂತ ಹೆಚ್ಚು ಜನಪದ ಸಾಹಿತ್ಯಕ್ಕೇ ಸಂಬಂಧಿಸಿದ ಕೃತಿಗಳನ್ನು ಪ್ರಕಟಿಸಿ ಪ್ರಾಕೃತಿಕವಾಗಿ ಬರಡಾಗಿದ್ದ ಈ ತಾಲ್ಲೂಕಿಗೆ ಜ್ಯೋತಿ ಹೊಸೂರು ಅವರು ಜಾನಪದದ ಪರಿಮಳ ಬೀರಿದ್ದಾರೆ. ಇಂತಹ ಜಾನಪದದ ಪರಿಮಳದಲ್ಲಿ ಅರಳಿದ ಹೂವೇ ಶ್ರೀ ವಿಷ್ಣು ಕಂಚಗಾರ ಅವರು.

ಕುಟುಂಬ ಪರಿವಾರ

ಬೆಳಗಾವಿ ಜಿಲ್ಲೆ ಜನಪದ ಕಲೆಗಳ ತವರು. ಈ ಜಿಲ್ಲೆಯ ಮಣ್ಣಿನ ಮಕ್ಕಳ ಉಸಿರಾಗಿ ಬೆಳೆದು ಬಂದಿರುವ ಜನಪದ ಕಲೆಯಲ್ಲಿ ಕಣಿವಾದನವು ಒಂದು. ಈ ಕಲೆಗಾಗಿ ಸುಮಾರು ಮೂರು ಶತಮಾನದಿಂದಲೂ ತಮ್ಮ ಜೀವನವನ್ನೇ ಮುಡಿಪಾಗಿಟ್ಟು, ಕಣಿ ನುಡಿಸುತ್ತ ಬಂದಿರುವ ಮನೆತನವೊಂದು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ತೊರಗಲ್ಲ ಗ್ರಾಮದಲ್ಲಿ 300 ವರ್ಷಗಳ ಹಿಂದೆ ಶ್ರೀ ರಾಮಪ್ಪ ಮತ್ತು ನರಸಪ್ಪಾ ಎಂಬ ಇರ್ವರು ಸಹೋದರರು ಇದ್ದರು. ಅವರು ವೃತ್ತಿಯಿಂದ ಕಂಚಗಾರರು. ಅಂದರೆ ಕಂಚಿನ ಕೆಲಸ ಮಾಡುತ್ತಿದ್ದರಿಂದ ಕಂಚಗಾರ ಮನೆತನದವರಾಗಿದ್ದರು. ಪ್ರವೃತ್ತಿಯಿಂದ ಕಣಿವಾದನ ಕಲಾವಿದರಾಗಿದ್ದರು

ನರಸಪ್ಪನವರಿಗೆ ಮಕ್ಕಳು ಇರಲಿಲ್ಲ ಆದರೆ ರಾಮಪ್ಪನವರಿಗೆ ಪರಸಪ್ಪ ಎಂಬ ಮಗನಿದ್ದು, ಆತ ಕಣಿವಾದ್ಯ ಕಲಾವಿದನಾಗಿದ್ದನು. ಕಾಲಾಂತರದಲ್ಲಿ ಸುಮಾರು 200 ವರ್ಷಗಳ ಹಿಂದೆ ವಿಜಾಪುರ ಜಿಲ್ಲೆ ಜಮಖಂಡಿ ತಾಲ್ಲೂಕು ತೇರದಾಳ ಗ್ರಾಮಕ್ಕೆ ಬಂದು ನೆಲೆಸಿದರು. ಅಲ್ಲಿ ತೊರಗಲ್ಲ್‌ದವರು ಎಂದು ಕರೆಯಿಸಿಕೊಳ್ಳುತ್ತಿದ್ದರು. ಇವರಿಗೆ ಮಲ್ಲಪ್ಪ, ಮಹಾದೇವಪ್ಪ, ಅಣ್ಣಪ್ಪ ಹಾಗೂ ಬಾಗವ್ವ ಎಂಬ ನಾಲ್ಕು ಜನ ಮಕ್ಕಳು. ಪರಸಪ್ಪನವರು ತನ್ನ ಮೂರು ಜನ ಮಕ್ಕಳಿಗೆ ಕಣಿವಾದನ ಕಲೆಯನ್ನು ಕಲಿಸಿದರು. ಅವರಲ್ಲಿ ಶ್ರೀ ಮಹಾದೇವಪ್ಪನು ಕಣಿಬಾರಿಸುತ್ತಿದ್ದನು. ಮಲ್ಲಪ್ಪ ಹಾಗೂ ಅಣ್ಣಪ್ಪ ಇವರು ದಿಮ್ಮು ಬಾರಿಸುತ್ತಿದ್ದರು. ಅವರು ತಮ್ಮ ಕಲೆಯನ್ನು ಎಲ್ಲ ಕಡೆಗೆ ಪ್ರದರ್ಶನ ಮಾಡಿ ಜನರ ಮೆಚ್ಚಿಗೆ ಗಣಿಸಿದ್ದರು. ಹೀಗೆ ಪರಸಪ್ಪನವರಿಂದ ಕಣಿ ಮಹಾದೇವನ ಕೈಗೆ ಕಣಿ ಹಸ್ತಾಂತರಗೊಂಡಿತು.

ಪ್ರತಿ ವರ್ಷ ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಯಮನೂರು ಗ್ರಾಮದಲ್ಲಿ ಜರಗುವ ಶ್ರೀ ಯಮನೂರಪ್ಪನ ಜಾತ್ರೆಯಲ್ಲಿ ತಮ್ಮ ಕಲಾ ಪ್ರದರ್ಶನ ಮಾಡಿ ಸೇವೆ ಸಲ್ಲಿಸುತ್ತಿದ್ದರು. ಅಲ್ಲಿಯ ಹಿರಿಯರು ಇವರ ಸೇವೆಗೆ ಆನಂದಭರಿತರಾಗಿ 150 ವರ್ಷಗಳ ಹಿಂದೆ ಮಹಾದೇವ ಕಂಚಗಾರ ಇವರಿಗೆ ಕಣಿ ಖಡೆಯನ್ನು (ಕಟ್ಟಿಗೆಯ ತುರಾಯಿ) ಕೊಟ್ಟು ಸನ್ಮಾನಿಸಿದರು. ಆ ಖಡೆ ಈಗಲೂ ಇದ್ದು ಅದಕ್ಕೆ 'ತುರಾಯಿಖಡೆ' ಎನ್ನುತ್ತಾರೆ. ಅದನ್ನು ಪ್ರತಿ ಅಮವಾಸ್ಯೆ ಹಾಗೂ ಹುಣ್ಣಿಮೆಯ ದಿನ ಪೂಜಿಸುವ ಸಂಪ್ರದಾಯವಿದೆ.

ಪರಸಪ್ಪನ ಮಕ್ಕಳಾದ ಮಲ್ಲಪ್ಪ ಹಾಗೂ ಮಹಾದೇವಪ್ಪನವರು

ಹಾರೂಗೇರಿಯ ಪತ್ತಾರ ಮನೆತನದಲ್ಲಿ ಕ್ರಮವಾಗಿ ಶ್ರೀಮತಿ ಶೇಕವ್ವ ಹಾಗೂ ಶ್ರೀಮತಿ ಗಂಗವ್ವಾ ಇವರನ್ನು ಮದುವೆಯಾದರು. ಮಲ್ಲಪ್ಪನವರಿಗೆ ಕ್ರಮವಾಗಿ ಯಮನವ್ವ, ತಾರವ್ವ, ಪರಸಪ್ಪ, ಸುಂದ್ರವ್ವ ಹಾಗು ಅಣ್ಣಪ್ಪ ಹೀಗೆ ಐದು ಜನ ಮಕ್ಕಳು, ಆದರೆ ಮಹದೇವಪ್ಪ ಹಾಗೂ ಅಣ್ಣಪ್ಪ ಇವರಿಗೆ ಮಕ್ಕಳಿರಲಿಲ್ಲ.

ಚಿಕ್ಕಪ್ಪನಾದ ಮಹಾದೇವಪ್ಪನು ತೇರದಾಳದಲ್ಲಿ ಅಣ್ಣನ ಮಕ್ಕಳಾದ ಪರಸಪ್ಪ ಹಾಗೂ ಅಣ್ಣಪ್ಪ ಇವರಿಗೆ ಅನನ್ಯ ಪ್ರೀತಿಯಿಂದ ಕಣಿವಾದನ ಕಲೆಯನ್ನು ಚಿಕ್ಕಂದಿನಿಂದಲೇ ಕಲಿಸಲು ಪ್ರಾರಂಭಿಸಿದರು. ಬಡತನದ ಪರಿಸ್ಥಿತಿಯಲ್ಲಿ ಸ್ವಲ್ಪ ಮರಾಠಿ ಕಲಿಸಿದರು. ತೇರದಾಳದಲ್ಲಿ ಜಮೀನು ಇರಲಿಲ್ಲ, ಮನೆ ಸ್ವಲ್ಪ ಇತ್ತು. ಭಾಂಡೆ ಕೆಲಸದ ಮೇಲೆ ಜೀವನ ಸಾಗಿಸುತ್ತಿದ್ದರು. ಕಣಿವಾದನ ಕಲೆಯಿಂದ ಸುತ್ತ ಮುತ್ತಲಿನ ಗ್ರಾಮದ ಜನರಿಗೆ ಚಿರಪರಿಚಿತರಾಗಿದ್ದರು. ಒಳ್ಳೆಯ ನಡತೆಯುಳ್ಳವರಾಗಿದ್ದರು. ಅಲ್ಲದೆ ಚೊಕ್ಕಟವಾದ ಸಂಸಾರವನ್ನು ನಡೆಸುತ್ತಿದ್ದರು. ಮುಂದೆ ಶ್ರೀ ಪರಸಪ್ಪ ಕಂಚಗಾರ ಇವರು ತೇರದಾಳದವರೇ ಆದ ಶ್ರೀ ಈಶ್ವರಪ್ಪ ಕಂಚಗಾರ ಹಾಗೂ ಮಹಾಲಿಂಗಪ್ಪ ಪಾಗಾದ (ತೇರದಾಳ) ಇವರನ್ನು ದಿಮ್ಮು ಬಾರಿಸುವ ಕಲಾವಿದರನ್ನಾಗಿ ಮಾಡಿಕೊಂಡು ಕಣಿ ಮೇಳ ಕಟ್ಟಿಕೊಂಡು ಕಲಾಸೇವೆಯನ್ನು ಪ್ರಾರಂಭಿಸಿದರು. ಅದರ ವಿವರ ಈ ಕೆಳಗಿನಂತಿದೆ :

ಶ್ರೀ ಪರಸಪ್ಪ ಕಂಚಗಾರ ಹಾಗೂ ಸಂಗಡಿಗರು

1. ಪರಸಪ್ಪ ಮಲ್ಲಪ್ಪ ಕಂಚಗಾರ — ಕಣಿವಾದ್ಯ
2. ಅಣ್ಣಪ್ಪ ಮಲ್ಲಪ್ಪ ಕಂಚಗಾರ — ತಾಳ
3. ಲಕ್ಷ್ಮಣ ರಾಮಪ್ಪ ಜಾಯಗೊಂಡ (ಮುತ್ತೂರ)ತಾಳ

4. ಈಶ್ವರಪ್ಪ ಕಂಚಗಾರ (ತೇರದಾಳ) ದಿಮ್ಮು
5. ಮಾಲಿಂಗಪ್ಪ ಪಾಗಾದ (ತೇರದಾಳ) ದಿಮ್ಮು
6. ಯಲ್ಲಪ್ಪ ಭಜಂತ್ರಿ ಬನಹಟ್ಟಿ ಸನಾದಿ
7. ಸತ್ಯಪ್ಪ ಭಜಂತ್ರಿ ಬನಹಟ್ಟಿ ಸನಾದಿ
8. ಅಡಿವೆಪ್ಪ ಭಜಂತ್ರಿ ಶೃತಿ

ಶ್ರೀ ಗದುಗಿನ ಪಂಚಾಕ್ಷರಿ ಗವಾಯಿಗಳ ಸಮ್ಮುಖದಲ್ಲಿ ಹಾಗೂ ಶ್ರೀ ಶಿವರಾಮ ಭುವ ಗವಾಯಿಗಳ ಎದುರು ಕಲಾ ಸೇವೆ ಸಲ್ಲಿಸಿದರು. ಆ ಸಮಯದಲ್ಲಿ ಮಹಾಲಿಂಗಪುರ, ಜಗದಾಳ ಬನಹಟ್ಟಿ, ಹೊಸೂರ, ಜಮಖಂಡಿ, ಅಥಣಿ, ಸಂಕೋನಟ್ಟಿ, ಕಡಲಟ್ಟಿ, ನದಿ ಇಂಗಳಗಾಂವ ಮುಂತಾದ ಗ್ರಾಮಗಳಲ್ಲಿ ಕಣಿ ಹಾಗೂ ಕರಡಿಮೇಳಗಳಿದ್ದವು. ಇವರ ಜೊತೆಯಲ್ಲಿ ಕಲಾ ಪ್ರದರ್ಶನ ಮಾಡುತ್ತ ಪ್ರಶಂಸೆಗೆ ಪಾತ್ರರಾದರು.

ಮುಂದೆ ತೇರದಾಳ, ಶೇಗುಣಸಿ, ರಬಕವಿ, ಬನಹಟ್ಟಿ, ಕುಳ್ಳೊಳ್ಳಿ, ಜಗದಾಳ, ನಾವಲಗಿ, ಮಧುರಖಂಡಿ. ಹುನ್ನೂರ, ಜಮಖಂಡಿ, ಅಲಗೂರು. ಚಿಕ್ಕಪಡಸಲಗಿ, ಮುತ್ತೂರು, ಅಥಣಿ, ನಾಗನೂರ, ಹಿಡಕಲ್, ಹಳ್ಳೂರ, ಚಿಮ್ಮಡ, ವಿಜಾಪೂರ, ಸೌಂದತ್ತಿ, ನಾಗರಾಳ, ಕೊಣ್ಣೂರ ಕೆಂಪಯ್ಯ ಸ್ವಾಮಿಗಳ ಮರಡಿ ಮಠದಲ್ಲಿ ಹಾಗು ಯಡೂರು ಹೀಗೆ ಇನ್ನು ಅನೇಕ ಗ್ರಾಮ ಹಾಗೂ ನಗರಗಳಲ್ಲಿ ಕಣಿವಾದ್ಯ ಪ್ರದರ್ಶನಮಾಡಿ ಎಲ್ಲ ಜನರ ಮಿಚ್ಚಿಗೆ ಪಡೆಯುವುದರ ಜೊತೆಗೆ ಅನೇಕ ಮಾನ ಸನ್ಮಾನಗಳನ್ನು ಪಡೆದರು.

ಆದರೆ ಪರಸಪ್ಪನವರ 12ನೇ ವಯಸ್ಸಿನಲ್ಲಿ ತಂದೆಯಾದ ಮಲ್ಲಪ್ಪನವರು ತೀರಿಕೊಂಡರು. ಕಾರಣ ಪರಸಪ್ಪನವರು ತಾಯಿಯ ತವರೂರಾದ ಹಾರೂಗೇರಿಗೆ ಜೀವನೋಪಾಯಕ್ಕಾಗಿ ಬರ

ಬೇಕಾಯಿತು. ಅಲ್ಲಿ ಬಂದು ಕಂಚಗಾರಿಕೆಯನ್ನು ಬಿಟ್ಟು, ಪತ್ತಾರಿಕೆಯನ್ನು (ಬೆಳ್ಳಿ, ಬಂಗಾರ ಸಾಮಾನು ತಯಾರಿಸುವ) ಪ್ರಾರಂಭಿಸಿದರು. ಪತ್ತಾರಿಕೆಯಲ್ಲಿ ಕುಶಲಕರ್ಮಿಗಳಾದ ಅವರು ಉತ್ತಮ ರೀತಿಯ ಕಾರ್ಯ ನಿರ್ವಹಿಸಿದರು. ಮುಂದೆ ಅವರು ಹಾರೂಗೇರಿಯ ಪತ್ತಾರ ಮನೆತನದ ಬಾಳವ್ವನನ್ನು ಕೈಹಿಡಿದರು. ಅವರಿಗೆ ಅಂಬವ್ವ, ಮಲ್ಲಪ್ಪ, ಬಾಗವ್ವ, ಈಶ್ವರ, ವಿಷ್ಣು, ಗುರುನಾಥ, ಭಗವಂತ, ವಿಮಲಾ ಹಾಗೂ ಅನ್ನಪೂರ್ಣ ಎಂಬ ಹೆಸರಿನ ಒಂಬತ್ತು ಮಕ್ಕಳು ಜನಿಸಿದರು. ಇವರಲ್ಲಿ ಐದನೆಯ ಮಗುವೇ ವಿಷ್ಣು ಕಂಚಗಾರ ಅವರು.

ವಿಷ್ಣುವಿನ ತಂದೆ ಪರಸಪ್ಪನವರು ತಮ್ಮ ಕಲೆಯನ್ನು ಎಲ್ಲ ಮಕ್ಕಳಿಗೂ ದಾರೆಯೆರೆಯುವುದಕ್ಕಾಗಿ ಹಗಳಿರುಳು ಚಿಂತಿಸುತ್ತಿದ್ದರು. ತಮ್ಮ ಐದು ಜನ ಮಕ್ಕಳು ಹಾಗೂ ತಮ್ಮನ ಮೂರು ಜನ ಮಕ್ಕಳಲ್ಲಿ ಈ ಕಲೆ ಕರಗತವಾಗಲಿಲ್ಲ ಎಂಬ ಕೊರಗು ಇತ್ತು. ಅಷ್ಟರಲ್ಲಿ ಅವರಿಗೆ ಅಸ್ತಮಾ ಸೇರಿ ಕಾರ್ಯಕ್ರಮ ನಿರ್ವಹಿಸಲು ಸಾಧ್ಯವಾಗಲಿಲ್ಲ. ಆಗ 1939 ರಲ್ಲಿ ಜನಿಸಿದ ವಿಷ್ಣು ಅವರಿಗೆ ತಮ್ಮ ಕಲೆಯನ್ನು ಧಾರೆಯೆರೆಯಲು ನಿರ್ಧರಿಸಿದರು. ಆಗ ವಿಷ್ಣು ಅವರಿಗೆ 12 ವರ್ಷ. ಕನ್ನಡ 5ನೇ ತರಗತಿ ಓದುತ್ತಿದ್ದರು. ಆಗ ಕಣಿವಾದನ ಕಲೆಯನ್ನು ಕಲಿಸಲು ಪ್ರಾರಂಭಿಸಿದರು. ವಿಷ್ಣು ಆಸಕ್ತಿಯಿಂದ ಕಲಿತನು.

ಅದೇ ಸಮಯದಲ್ಲಿ ಪ್ರತಿ ವರುಷ ಚೈತ್ರ ಶುದ್ಧ ಪೌರ್ಣಿಮಾ (ದವನದ ಹುಣ್ಣಿವೆ) 1952ನೇ ಇಸ್ವಿಯಲ್ಲಿ ಬೆಂಡಿವಾಡ ಗ್ರಾಮದಲ್ಲಿ ಶ್ರೀ ರೇವಣಸಿದ್ದೇಶ್ವರ ಜಾತ್ರೆ ಮಹೋತ್ಸವದಲ್ಲಿ ಅಲ್ಲಿಯ ಮಠದ ಶ್ರೀಗಳಾದ ಶ್ರೀ ಮ.ನಿ.ಪ್ರ, ಸಿದ್ಧಪ್ರಭುಸ್ವಾಮಿಗಳ ಪಟ್ಟಾಭಿಷೇಕದ ನಿಮಿತ್ತವಾಗಿ ಅನೇಕ ಕಲಾವಿದರನ್ನು ಕರೆಯಿಸಿ. ಕಲಾಪ್ರದರ್ಶನ

ಏರ್ಪಡಿಸಿದ್ದರು. ಅಲ್ಲಿ ತ್ಮ ಜೀವನದ ಹಂಗು ತೊರೆದು ಉತ್ತಮ ರೀತಿಯಿಂದ ಕಲಾಸೇವೆ ಸಲ್ಲಿಸಿದರು. ಅಲ್ಲಿ ಸೇರಿದ ಎಲ್ಲ ಸಭಾಸದರ ಮೆಚ್ಚಿಗೆ ಪಡೆದರು. ಆಗ ಆನಂದದಿಂದ ಅದೇ ವೇದಿಕೆಯ ಮೇಲೆ ಚಿ|| ವಿಷ್ಣುವಿನ ಕೈಯಲ್ಲಿ ಕಣಿ ಕೊಟ್ಟರು. ಭಾರವಾದ ಕಣಿಯನ್ನು ಚಿಕ್ಕಪ್ಪನ ಮಗನಾದ ಶ್ರೀ ಮಹಾದೇವ ಅಣ್ಣನು ಎತ್ತಿಹಿಡಿದನು. ಅರ್ಧ ಘಂಟೆಯವರೆಗೆ ಕಲಾಸೇವೆ ಸಲ್ಲಿಸಿದ ವಿಷ್ಣು ಅವರಿಗೆ ಎಲ್ಲ ಕಲಾಭಿಮಾನಿಗಳ ಚಪ್ಪಾಳೆ ತಟ್ಟಿ, ಶುಭ ಹಾರೈಸಿದರು. ಅಲ್ಲಿಂದಲೇ ವಿಷ್ಣು ಅವರ ಶ್ರೀ ಚನ್ನವೃಷಭೇಂದ್ರ ಕಲಾಮೇಳ, ಹಾರೂಗೇರಿ ಪ್ರಾರಂಭವಾಯಿತು.

ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಜಾನಪದದ ಪ್ರಕಾರಗಳು ಮೂಲೆಗುಂಪಾಗಿ ನಮ್ಮ ಸಾಂಸ್ಕೃತಿಕ ಸಂಪತ್ತು ಕ್ಷೀಣಿಸುತ್ತಿದೆ. ಇಂಥ ಸಂದರ್ಭದಲ್ಲಿ ಕಲೆಯ ಉಳಿಯುವಿಕೆಗಾಗಿ ಬದುಕನ್ನು ಮೀಸಲಿಟ್ಟಿರುವ ಹಾರೂಗೇರಿಯ ವಿಷ್ಣು ಪರಸಪ್ಪ ಕಂಚಗಾರ ಕನ್ನಡ ನಾಡಿನ ಅಪರೂಪದ ಕಣಿವಾದಕ ವಿಷ್ಣು ಕಂಚಗಾರನ ಕಣಿಯ ದನಿ ಕೇಳದ ಕಲಾರಸಿಕರಿಲ್ಲ ಕಣಿಯ ಮೇಲೆ ಗುಣಿ ಕುಣಿಸುವ ಕಂಚಗಾರನ ಕಲೆಗಾರಿಕೆಗೆ ತಲೆದೂಗದವರಿಲ್ಲ.

ಬಾಲ್ಯ, ಶಿಕ್ಷಣ, ಉದ್ಯೋಗ

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಹಾರೋಗೇರಿ ಗ್ರಾಮದಲ್ಲಿ 1-12-1939 ರಂದು ಜನಿಸಿದರು. ತಂದೆ ಪರಸಪ್ಪ. ತಾಯಿ ಬಾಳವ್ವ, ಕಂಚಗಾರ ಎಂಬುದು ಮನೆತನದ ಹೆಸರು. ವಿಷ್ಣು ಎಂಬುದು ಹುಟ್ಟಿನ ಹೆಸರು, ಹೀಗಾಗಿ ವಿಷ್ಣು ಪರಸಪ್ಪ ಕಂಚಗಾರ ಅವರು 'ವಿಷ್ಣು ಕಂಚಗಾರ' ಎಂದೇ ಕನ್ನಡನಾಡಿಗೆ ಪರಿಚಿತರಾದರು.

ವಿಶ್ವಕರ್ಮ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಇವರ ಕುಲದೇವತೆ ಕಾಳಿಕಾದೇವಿ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಪರಸಪ್ಪ ತಾಯಿಯ ತವರೂರಾದ ಹಾರೂಗೇರಿಗೆ ಜೀವನೋಪಾಯಕ್ಕಾಗಿ ಬರಲು, ತಾಯಿಯ (ಶೇಖವ್ವ)ನ ಅಣ್ಣಂದಿರು ಜಮೀನು ನೀಡಿ ಉಪಜೀವನಕ್ಕಾಗಿ ಒಂದು ನೆಲೆ ಮಾಡಿ ಕೊಟ್ಟರು. ಅಲ್ಲಿ ಮೂಲ ಉದ್ಯೋಗವಾದ ಕಂಚುಗಾರಿಕೆಯನ್ನು ಬಿಟ್ಟು, ಪತ್ತಾರಿಕೆಯನ್ನು ಪ್ರಾರಂಭಿಸಿದರು. ಬಡತನದ ಪರಿಸ್ಥಿತಿಯಿಂದಾಗಿ ವಿಷ್ಣುವಿಗೆ ಹೆಚ್ಚಿನ ಶಿಕ್ಷಣ ನೀಡಲು ಸಾಧ್ಯವಾಗಲಿಲ್ಲ. ಕನ್ನಡ ಆರನೇ ತರಗತಿಯವರೆಗೆ ಮಾತ್ರ ಓದಿದರು. ತನ್ನ ಐದು ಜನ ಮಕ್ಕಳಲ್ಲಿ ಯಾರಿಗೂ ಒಲಿಯದ ಕಣಿವಾದನ ಕಲೆಯನ್ನು ವಿಷ್ಣುವಿಗೆ ಬಾಲ್ಯದಿಂದಲೇ ಕಲಿಸಲು ಪ್ರಾರಂಭಿಸಿದರು.

ಪರಸರ-ಪ್ರಭಾವ-ಪ್ರೇರಣೆ

ತಂದೆ-ಅಜ್ಜ-ಮುತ್ತಜ್ಜರಿಂದ ಬಂದ ವಂಶಪರಂಪರೆಯ ಕಣಿಜ್ಞಾನ, ತಾಯಿಯ ಒತ್ತಾಸೆ. ಮನೆಯಲ್ಲಿ ಊರಿನಲ್ಲಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ನಡೆಯುತ್ತಿದ್ದ ಪೂಜೆ-ಪುರಸ್ಕಾರ, ಹಾಡು-ಕೀರ್ತನೆ, ಕೋಲಾಟ, ಬಯಲಾಟ, ಲಾವಣಿ ಪದಗಳು ಕಣಿ ಮೇಳಗಳು ಕರಡಿ ಮಜಲು, ಸೋಗಿನ ವೇಷಗಳು, ಬಾಲಕ ವಿಷ್ಣು ಕಂಚಗಾರರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದವು. ಗುರು ಶ್ರೀ ಲಕ್ಷ್ಮಣ ರಾಯಪ್ಪ ಜಾಗೊಂಡ ಸಾ॥ ಮುತ್ತೂರು ತಾ॥ ಜಮಖಂಡಿ ಇವರು ಗುರು ಸ್ವರೂಪದಲ್ಲಿ ಮಾರ್ಗದರ್ಶನ ನೀಡಿದರು.

1952ನೇ ಇಸ್ವಿಯಲ್ಲಿ ಬೆಂಡಿವಾಡ ಗ್ರಾಮದಲ್ಲಿ ಶ್ರೀ ರೇವಣ ಸಿದ್ದೇಶ್ವರ ಜಾತ್ರಾ ಮಹೋತ್ಸವದಲ್ಲಿ ಕಣಿವಾದನ ಸೇವೆ ಸಲ್ಲಿಸಿ ;

ಎಲ್ಲ ಕಲಾಭಿಮಾನಗಳಿಂದ ಪ್ರಶಂಸೆಗೆ ಪಾತ್ರರಾದದ್ದು ಅವರ ಮುಂದಿನ ಕಲಾ ಸೇವೆಗೆ ನಾಂದಿಯಾಯಿತು. ಅಲ್ಲಿಂದಲೇ ವಿಷ್ಣು ಅವರ ಕಲಾ ಮೇಳ ಹಾರೂಗೇರಿಯಲ್ಲಿ ಹುಟ್ಟಿಕೊಂಡಿತು.

ವಿಷ್ಣು ಕಂಚಗಾರ ಹಾಗೂ ಸಂಗಡಿಗರು

1. ವಿಷ್ಣು ಪರಸಪ್ಪ ಕಂಚಗಾರ	ಕಣಿವಾದ್ಯ
2. ಬೂತಾಳಿ ಅಮ್ಮಣಪ್ಪ ಹಂಚಿನಾಳ ಚಿಕ್ಕಪಡಸಲಗಿ	ತಾಳ
3. ಸಂಗಪ್ಪ ಕಂಕನವಾಡಿ	ತಾಳ
4. ಗುರುನಾಥ ಕಂಚಗಾರ	ದಿಮ್ಮು
5. ಭಗವಂತ ಕಂಚಗಾರ	ದಿಮ್ಮು
6. ಯಮನಪ್ಪ ಭೀಮಪ್ಪ ಭಜಂತ್ರಿ	ಸನಾದಿ
7. ಮನಸೂರು ಯಮನಪ್ಪ ಭಜಂತ್ರಿ	ಸನಾದಿ
8. ರಾಮಪ್ಪ ಭಜಂತ್ರಿ	ಶೃತಿ
9. ಬಾಳೇಸಿ ಶಂಕರೆಪ್ಪ ಆಸ್ಕಿ (ಕಾಯಿಸಿಕೊಡುವುದು)	

ಪಲ್ಲವಿಸಿದ ಕಲೆಯ ಕಂಪು

ವಂಶಪರಂಪರೆಯಿಂದಿ ಬಂದ ಕಲೆಯನ್ನು ವಿಷ್ಣು ಕಂಚಗಾರ ಮುಂದುವರೆಸಿದರು. ಅವರ ಜೊತೆಗೆ ಇಬ್ಬರು ತಮ್ಮಂದಿರಾದ ಗುರುನಾಥ ಕಂಚಗಾರ ಹಾಗೂಭಗವಂತ ಕಂಚಗಾರರು ದಿಮ್ಮು ಸಾತಿ ನೀಡಿದರು. ಚಿಕ್ಕಪ್ಪನದ ಸ್ರೀ ಅಣ್ಣಪ್ಪನವರು ತಾಳ ಹಾಕುತ್ತಿದ್ದರು.

ಆ ಸಮಯದಲ್ಲಿ ಪ್ರತಿ ವರ್ಷ ವೇದಾಂತ ಶಾಸ್ತ್ರ ಹೇಳಲು ಹಾರೂಗೇರಿಯ ಶ್ರೀ ರಾಮಲಿಂಗೇಶ್ವರ ಮಂದಿರಕ್ಕೆ ಹುಬ್ಬಳ್ಳಿಯ ಶ್ರೀ ಜಡಿಸಿದ್ಧಾಸ್ರಮದ ಶ್ರೀ ಶಂಕರಾನಂದ ಪರಮಹಂಸ

ಮಹಾಸ್ವಾಮಿಗಳು ಆಗಮಿಸುತ್ತಿದ್ದರು. ಕಲಾ ಪ್ರೇಮಿಗಳಾದ ಅವರಿಗೆ ಈ ಎಲ್ಲ ಕಲಾವಿದರ ಪರಿಚಯ ಇತ್ತು. ಮೇಲಾಗಿ ಕಲಾ ಪ್ರದರ್ಶನವನ್ನು ಪ್ರತ್ಯಕ್ಷವಾಗಿ ನೋಡಿದ್ದರು. ಅವರು ಹಾರೂಗೇರಿಗೆ 1955 ರಲ್ಲಿ ಬಂದಾಗ ಅವರ ಶಿಷ್ಯ ವೃಂದ ಅಂದರೆ ಶ್ರೀ ಬಾಬಾಗೌಡ ಪಾಟೀಲ, ರಾಮಗೌಡಾ ಪಾಟೀಲ, ಜೀವಪ್ಪ ಕೊತ್ತಲಗಿ, ಗುಂಡುರಾವ ಕುಲಕರ್ಣಿ, ಪಾಯಪ್ಪಾ ಹಳ್ಳೂರ, ನಿಂಗೌಡಾ ಉಮರಾಣಿ, ಶ್ರೀ ಗೋವಿಂದ ಮಾಸ್ತರ, ಬಾಬುರಾವ ಕುಲಕರ್ಣಿ, ರಾಯಪ್ಪ ಬಂತಿ, ಸಿದ್ಧಯ್ಯ ಚಿಕ್ಕಟ್ಟಿ, ಸಿದರಾಯಿ ಚಿಕ್ಕಟ್ಟಿ ಜೋತೆಪ್ಪ ಜೋಕಾನಟ್ಟಿ, ಯಮನಪ್ಪ ರಬಕವಿ, ಕಲ್ಲಪ್ಪ ಬದನೆಕಾಯಿ ಶಿವಗೌಡ ಉಮರಾಣಿ ಇನ್ನೂ ಅನೇಕ ಕಲಾವಿದರು ಶ್ರೀಗಳ ಮುಂದೆ ಕಲಾಸೇವೆ ಸಲ್ಲಿಸಿದರು. ಶ್ರೀಗಳು ಆನಂದಭರಿತರಾಗಿ ನಿಮಗೆ ಒಳ್ಳೆಯದಾಗಲಿ ಎಂದು ಆಶೀರ್ವದಿಸಿದರು.

1952 ವೈಶಾಖ ಶುದ್ಧ ತೃತೀಯಾ (ಅಕ್ಷಯ ತೃತಿಯಾ) ಬಸವ ಜಯಂತಿಯಂದು ನದಿ ಇಂಗಳಗಾವದಲ್ಲಿ ನಡೆಯುವ ಶ್ರೀ ಬಸವೇಶ್ವರ ಜಾತ್ರೆಯ ರಥೋತ್ಸವದಲ್ಲಿ ಕಲಾಸೇವೆ ಸಲ್ಲಿಸಿ, ಅಲ್ಲಿಯ ಕಲಾವಿದರಾದ ಶ್ರೀ ರಾಮಣ್ಣ ಮೋಕಾಸಿ, ರಾಚಪ್ಪ ಮೊಕಾಶಿ, ಬಸಗೌಡ ಪಾಟೀಲ, ಬಸಗೌಡ ಸಾವಂತ್ರಿ, ಗಿರಿಮಲ್ಲಪ್ಪ ಸಾವಂತ್ರಿ, ದುಂಡಪ್ಪ ರಾಚಗೌಡರ ಅದಗೌಡ ಪಾಟೀಲ, ಚೆನ್ನಯ್ಯ ಮಠಪತಿ, ಶಿವಲಿಂಗಯ್ಯ ಮಠಪತಿ ಬಾಪುಗೌಡ ಗಿರಿಮಲ್ಲಣ್ಣವರ, ಪರಗೌಡ, ಮುದಗೌಡರ, ಪರಗೌಡ ಗುಂಡಕಲ್ಲಿ ಇನ್ನೂ ಅನೇಕ ಪ್ರಮುಖ ಕಲಾವಿದರಿಂದ ಪ್ರಶಂಸೆಗೆ ಪಾತ್ರರಾದರು.

1959 ರಲ್ಲಿ ತೇರದಾಳ ಶ್ರೀ ಹನುಮಂತದೇವರ ಓಕುಳಿ ನಿಮಿತ್ತ ಶ್ರೀ ವೀರಭದ್ರಪ್ಪ ಕರಡಿ ಸಾ॥ ಮಹಾಲಿಂಗಪೂರ ಹಾಗೂ ಸಂಗಡಿಗರು ಮತ್ತು ವಿಷ್ಣು ಕಂಚಗಾರ ಹಾಗೂ ಸಂಗಡಿಗರಿಂದ

ರವಿವಾರ ರಾತ್ರಿ 10 ಘಂಟೆಯಿಂದ ಬೆಳಗಿನ 6 ಘಂಟೆಯವರೆಗೆ ಕಣಿವಾದನ ನುಡಿಸಿ ಅಲ್ಲಿ ನೆರೆದ ಜನರ ಮೆಚ್ಚಿಗೆ ಗಳಿಸಿದರು.

ಅದೇ ವರ್ಷ ವೈಶಾಖ ಮಾಸದಲ್ಲಿ ಅಥಣಿ ತಾಲ್ಲೂಕು ಶೇಗುಣಿಸಿ ಗ್ರಾಮದಲ್ಲಿ ಶ್ರೀ ಮಲ್ಲಿಕಾರ್ಜುನ ಐದೇಶಿ ಮಹೋತ್ಸವದ ನಿಮಿತ್ತ ಶ್ರೀ ವಿಷ್ಣು ಕಂಚಗಾರ ಹಾಗೂ ಶ್ರೀ ಭೀಮಗೌಡ ಅರಳಿಮಟ್ಟಿ ಇವರ ಕಣಿ ಮೇಳಗಳು ಒಳ್ಳೆಯ ವಿಜೃಂಭಣೆಯಿಂದ ಜರುಗಿ ಜನರ ಮನಸ್ಸನ್ನು ಗೆಲ್ಲುವಲ್ಲಿ ಯಶಸ್ವಿಯಾದವು.

ಮುಂದೆ 1960ನೇ ಇಸ್ವಿ ವೈಶಾಕ ಶುದ್ದ ದ್ವಿತೀಯಾ ಮಂಗಳವಾರದಂದು ಪರಸಪ್ಪ ಕಮಚಗಾರ ಅವರು ಇಹಲೋಕ ತ್ಯಜಿಸಿದರು. ಆಗ ಚಿಕ್ಕಪ್ಪನಾದ ಅಣ್ಣಪ್ಪ ಹಾಗೂ ಮಲ್ಲಪ್ಪನವರು ಮಾರ್ಗದರ್ಶನ ಮಾಡಿದರು. ಆ ವರ್ಷ ನದಿ ಇಂಗಳಗಾಧಿಯ ಬಸವೇಶ್ವರ ಜಾತ್ರೆಯಲ್ಲಿ ಕಣಿ ಸೇವೆ ಸಲ್ಲಿಸುವ ಅವಕಾಶ ತಪ್ಪಿಹೋಯಿತು. ಅಷ್ಟರಲ್ಲಿ ಶ್ರೀ ಲಕ್ಷ್ಮಣ ಮಾಸ್ತರರು ಕರಡಿ ಮಜಲು ಕಲಿಸಲು ಕಂಕನವಾಡಿ ಗ್ರಾಮದಲ್ಲಿ ಶ್ರೀ ಶಿವಲಿಂಗಪ್ಪ ಕಾಡಗಿ, ಕರಡಿ ಮಜಲು, ನಿಂಗಪ್ಪ, ಕಾಡಗಿ, ಡೊಳ್ಳು, ಪರಸಪ್ಪ ಅತ್ತೆಪ್ಪನವರ. ಡೊಳ್ಳು, ಗಿರಿಮಲ್ಲಪ್ಪ ಗುಳಕಿ, ತಾಳ, ಕಲ್ಲಪ್ಪ ಅಥಣಿ, ತಾಳ, ಚೆನ್ನಮ್ಮಲ್ಲಯ್ಯ, ಹಿರೇಮಠ ಡೊಳ್ಳು ಹೀಗೆ ಎಲ್ಲ ಕಲಾವಿದರಿಗೆ ಉತ್ತಮ ರೀತಿಯಲ್ಲಿ ಕಲಾಸೇವೆ ಧಾರೆಯೆರೆದರು.

ಇದರಂತೆ ಚಿಕ್ಕಪಡಸಾಲಗಿ ಗ್ರಾಮದಲ್ಲಿ ಶ್ರೀ ಡಾಕಪ್ಪನಿಗೆ ಕರಡಿ ಮಜಲು, ಗೌಡಪ್ಪ ಹಾಗೂ ಗಿರೆಪ್ಪನಿಗೆ ಡೊಳ್ಳು, ಭೂತಾಳಿ ಹನುಮಂತ ಇವರಿಗೆ, ತಾಳ ಕಲಿಸಿದರು.

1961 ರಲ್ಲಿ ಜಮಖಂಡಿಯಲ್ಲಿ ಶ್ರೀ ಹನುಮಂತದೇವರ ಓಕಳಿ ನಿಮಿತ್ತ ವಿಷ್ಣು ಕಂಚಗಾರ ಹಾಗೂ ಭೀಮರಾಯಪ್ಪ ಪತ್ತಾರ ಹಾಗೂ ಸಂಗಡಿಗರಿಂದ ಕಣಿ ಮಜಲು ಜರುಗಿದವು.

ಪ್ರತಿ ವರ್ಷ ಮಹಾಶಿವರಾತ್ರಿಯಲ್ಲಿ ಚಿಕ್ಕಪಡಸಲಗಿ ಗ್ರಾಮದಲ್ಲಿ ಶ್ರೀ ಚಕ್ರವರ್ತಿ ಸದಾಶಿವ ಮಹಾರಾಜ ಬಬವಾದಿ ಇವರ ಜಾತ್ರಾ ಮಹೋತ್ಸವದಲ್ಲಿ ಕಣಿವಾದನ ನುಡಿ ಸೇವೆ ಸಲ್ಲಿಸಿ ಜನ ಮನದ ಮೆಚ್ಚಿಗೆ ಪಡೆದರು.

1962 ರಲ್ಲಿ ಮುಂಬಯಿಯಲ್ಲಿ ಜರುಗಿದ ಅಖಿಲ ಭಾರತ ಸೇವಾದಳದ ಮಹಾಶಿಬಿರಕ್ಕೆ ನಾ.ಸು. ಹರ್ಡೇಕರ ಅವರೊಂದಿಗೆ ವಿಷ್ಣು ಕಂಚಗಾರ ಹೋಗಿದ್ದರು. ಅಲ್ಲಿ ಕಣಿವಾದನದ ಮೂಲಕ ವಿಷ್ಣು ಭಾರತದ ಮೊದಲ ಪ್ರಧಾನಿ ಜವಾಹರಲಾಲ ನೆಹರು ಅವರ ಮೆಚ್ಚಿಗೆ ಗಳಿಸಿದರು.

1963 ರಲ್ಲಿ ನದಿ ಇಮಗಳ ಗ್ರಾಮಕ್ಕೆ ಅಥಣಿಯ ಮುರುಗೇಂದ್ರ ಮಹಾಶಿವಯೋಗಿಗಳು, ಧಾರವಾಡದ ಮೃತ್ಯುಂಜಯ ಮಹಾಸ್ವಾಮಿಗಳು ಪ್ರಥಮವಾಗಿ ಆಗಮಿಸಿದ್ದರು. ಡಾ. ಮಲ್ಲಿಕಾರ್ಜುನ ಮನ್ಸೂರ ಹಾಗು ಅನೇಕ ಕಲಾವಿದರು ಆಗಮಿಸಿದ್ದರು. ಚಿಕ್ಕವರ ಕಲಾಸೇವೆಯನ್ನು ನೋಡಿ ಪೂಜ್ಯರು ಬಹಳ ಆನಂದಪಟ್ಟರು ಒಬ್ಬ ಹಿರಿಯರು ಪೂಜ್ಯರ ಮೇಲೆ ಒಂದು ಸುಂದರ ವಚನ ಬರೆದು ಗುಪ್ತವಾಗಿ ಕೊಟ್ಟರು ಅದುವೇ 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಶ್ರೀ ಮೃತ್ಯುಂಜಯ ಅಪ್ಪಗಳವರೆಗೆ ನಮೋ ನಮಃ' ? ಹೀಗೆ ಬರೆದ ವಚನವನ್ನು ವಿಷ್ಣು ಅವರು ಕಣಿಯಲ್ಲಿ ಒಂದೊಂದಾಗಿ ಅಕ್ಷರ ನುಡಿಸಿದರು. ಇದನ್ನು ದಿಮ್ಮು ಬಾರಿಸುವ ಕಲಾವಿದರಾದ ಗುರುನಾಥ ಹಾಗೂ ಭಗವಂತರು ದೂರದಲ್ಲಿ ಕುಳಿತು ಎಲ್ಲ ಅಕ್ಷರ ಬರೆದು ಪೂಜ್ಯರ ಮುಂದೆ ಹೇಳಿದರು. ಆಗ ಎಲ್ಲರಿಗೂ ಸೋಜಿಗವಾಯಿತು. ಜೊತೆಗೆ ಆಗ ಧಾರವಾಡದ ಮೃತ್ಯುಂಜಯ ಶಿವಯೋಗಿಗಳು ಮುರುಘಾ ಮಠಕ್ಕೆ ಕಲಾವಿದರನ್ನು ಕರೆತರಲು ಆಜ್ಞೆ ಮಾಡಿದರು ಅದೇ

ವರ್ಷ ಫೆಬ್ರುವರಿ ತಿಂಗಳಲ್ಲಿ ನಡೆಯುವ ಎರಡು ದಿನದ ಜಾತ್ರೆಗೆ ಕಲಾವಿದರು ಹೋಗಲು; ಅವರಿಗೆ ಎಲ್ಲ ರೀತಿಯ ಸಹಾಯ ಸಹಕಾರ ನೀಡಿದರು. ಪ್ರತಿದಿನ 4 ಘಂಟೆಗೆ ಸಂಗೀತ ಕಛೇರಿ ಪ್ರಾರಂಭವಾಗಿ ರಾತ್ರಿ 9 ಘಂಟೆಯವರೆಗೆ ನಡೆಯುತ್ತಿತ್ತು, ಈ ಸಂಗೀತ ಕಛೇರಿಯಲ್ಲಿ ಮಲ್ಲಿಕಾರ್ಜುನ ಮನ್ಸೂರ ಬಸವರಾಜ ರಾಜಗುರು. ವೇ॥ ಪುಟ್ಟರಾಜ ಗವಾಯಿಗಳು. ಜೋಳದರಾಶಿ ದೊಡ್ಡನಗೌಡರು, ಬಾಳಪ್ಪ ಹುಕ್ಕೇರಿ ಮತ್ತು ಆಕಾಶವಾಣಿಯ ಬೇರೆ ಬೇರೆ ಕಲಾವಿದರು ಭಾಗವಹಿಸಿ ಕಲಾಸೇವೆ ಸಲ್ಲಿಸುತ್ತಿದ್ದರು. ಇವರೆಲ್ಲ ಎದುರಿಗೆ ವಿಷ್ಣುವಿನ ಕಣಿವಾದನ ಸೇವೆ ನಡೆಯುತ್ತಿತ್ತು ಇದನ್ನು ಮೆಚ್ಚಿದ ಮೃತ್ಯುಂಜಯ ಶಿವಯೋಗಿಗಲು ಆಕಾಶವಾಣಿ ಕೇಂದ್ರಕ್ಕೆ ಕಲಾವಿದರ ಸೇವೆಯನ್ನು ಬಳಸಿಕೊಳ್ಳಲು ಶಿಫಾರಸು ಮಾಡಿದರು.

ಪೂಜ್ಯರ ಶಿಫಾರಸ್ಸಿನ ಮೇರೆಗೆ ಆಕಾಶವಾಣಿಯ ನಿಲಯ ನಿರ್ದೇಶಕರು ಮರುದಿನ ಬೆಳಿಗ್ಗೆ ಕಲಾವಿದರನ್ನು ಕೇಂದ್ರಕ್ಕೆ ಕರೆಯಿಸಿ ಧ್ವನಿ ಪರೀಕ್ಷೆ ಮಾಡಿ ಒಂದು ವಾರದೊಳಗೆ ಕಲಾವಿದರಿಗೆ ಅವಕಾಶ ಕಲ್ಪಿಸಿಕೊಟ್ಟರು. ಆಗ ಗೌರವ ಧನ 163 ರೂಪಾಯಿ ಪಡೆದಿದ್ದರು. ಅಲ್ಲಿಂದ ಮೇಲಿಂದ ಮೇಲೆ ಸುಮಾರು ಮುವತ್ತು ವರ್ಷದಿಂದ ಆಕಾಶವಾಣಿ ಕೇಂದ್ರದಿಂದ ಕಣಿವಾದನ ಸೇವೆ ಪ್ರಸಾರವಾಗುತ್ತ ಬಂದಿದೆ.

ವಿಷ್ಣು ಅವರ ಕಣಿ ಸೇವೆಗೆ ಸಹಕಾರ ನೀಡಿದವರಲ್ಲಿ ಇಂಗಳಗಾವಿಯ ಮಾಳಯ್ಯ ಸ್ವಾಮಿಗಳು, ನಾಗಪ್ಪ ಮೊಕಾಶಿ, ಮಲ್ಲಪ್ಪಾ ಸಾವಂತ್ರಿ, ಸಂಗಪ್ಪಾ ಸಾವಂತ್ರಿ, ದುಂಡಪ್ಪಾ ಮೊಕಾಸಿ, ಮಲಗೌಡ ಪಾಟೀಲ, ಅಲಗೌಡ ಗಿರಿಮಲ್ಲಣ್ಣವರ ಬಸಪ್ಪ ಮಲ್ಲಪ್ಪಬಡಿಗೇರ ಬಾಳಪ್ಪ ಮೊಕಾಸಿ, ಶಿವಪುತ್ರಪ್ಪ ಮೊಕಾಸಿ, ಸತ್ಯಪ್ಪ ಭಜಂತ್ರಿ ಮುಂತಾದವರು ಪ್ರಮುಖರಾಗಿದ್ದಾರೆ.

ಇವರು ಹಿಡಕಲ್, ಮುಗಳಖೋಡ. ಹಂದಿಗುಂದ, ಹಳ್ಳೂರ ನಾಗನೂರು, ಹೊಸಟ್ಟಿ, ಸಿಂದಿಕುರುಬೆಟ್ಟ ಘಟಪ್ರಭಾ, ಹುಲ್ಲೊಳ್ಳಿ, ಹುಕ್ಕೇರಿ, ಬೆಳಗಾವಿ, ಎಂ. ಕೆ. ಹುಬ್ಬಳ್ಳಿ, ಇಂಚಲ, ಬೈಲಹೊಂಗಲ, ಸೌದತ್ತಿ, ಮುರಘೋಡ, ಧಾರವಾಡ, ಹುಬ್ಬಳ್ಳಿ, ಹಾವೇರಿ ಕುಂದಗೋಳ, ಶಿಶುವಿನಾಳ, ಬೆಂಗಳೂರು, ರಾಮನಗರ, ಬಾನಾದೂರು. ಜಾನಪದ ಲೋಕ ಮೈಸೂರು, ಶ್ರವಣಬೆಳಗೊಳ ಹೀಗೆ ನಾಡಿನಾದ್ಯಂತ ಅವರ ಕಣಿಯ ಧ್ವನಿ ನುಡಿಸಿ ಜನಮನದ ಮೆಚ್ಚಿಗೆಗೆ ಪಾತ್ರರಾಗಿದ್ದಾರೆ.

ಶ್ರೀ ಚನ್ನವೃಷಭೇಂದ್ರ ದೇವರಕೊಂಡ ಅಜ್ಜನವರ ಲೀಲಾಮಠ ಹಾರೂಗೇರಿಯಲ್ಲಿ ಹುಬ್ಬಳ್ಳಿಯ ಜಡಿಸಿದ್ಧಾಶ್ರಮದ ಶಿವಾನಂದ ಪರಮಹಂಸರು ಆಗಮಿಸಿದ್ದರು. ಅವರ ಶಿಷ್ಯ ವರಂದದವರಾದ ಶ್ರೀ ಅಪ್ಪಾಸಾಬ ಕುಲಕರ್ಣಿ, ದುಂಡಪ್ಪ ಗವಣ್ಣವರ, ಬಾಳೇಶಿ ಕೊತ್ತಲಗಿ, ನಿಂಗೌಡ ಪರಮಗೌಡರ, ಮಾರುತಿ ಧರ್ಮಟ್ಟಿ, ರಾಮು ರಬಕವಿ, ಬಾಬು ದರೂರ, ವಿಠಲರಾವ ಬಂತಿ, ಹನುಮಂತ ಸವದಿ. ರಾಮು ಸುಬ್ಬಣ್ಣವರ ದುಂಡಪ್ಪ ಸವದಿ ಇನ್ನು ಹಲವಾರು ಸದ್ಭಕ್ತರು ಏರ್ಪಡಿಸಿದ ಕಾರ್ಯಕ್ರಮದಲ್ಲಿ ಕಣಿವಾದನ ನುಡಿ ಸೇವೆ ಸಲ್ಲಿಸಿ ಪೂಜ್ಯರಿಂದ ಆಶೀರ್ವಾದ ಪಡೆದರು.

ನಂತರ ಅಥಣಿ ನಂದಗಾಂವ, ಶಿರಹಟ್ಟಿ, ಮೈಗೂರ, ಮುತ್ತೂರ, ಕಂಕನವಾಡಿ, ತುಬಚಿ-ಕುಂಬಾರಹಳ್ಳಿ ಆಲಗೂರ ಹಿರೇಪಡಸಲಗಿ. ಚಿಕ್ಕ ಪಡಸಲಗಿ ಬಬವಾದಿ, ಹಣಮಸಾಗರ, ಸಾರವಾಡಿ, ವಿಜಾಪೂರ ಬಿಜ್ಜರಗಿ, ಐಗಲಿ, ಕೋಹಳ್ಳಿ, ಅಡೋಳಟ್ಟಿ, ಚಮಕೇರಿ, ಬಾಳಿಗೇರಿ, ಸಿಂಧೂರ, ಬಿಳ್ಳೂರ ಸತ್ತಿ, ಸೌಧಿ, ಹಿಪ್ಪರಗಿ, ನಂದೇಶ್ವರ, ಹಳಿಂಗಳಿ, ದರೂರ, ಸಪ್ತಸಾಗರ, ಸಿದ್ಧಾಪೂರ,

ಪರಮಾನಂದವಾಡಿ, ಎಲಪಾರಟ್ಟಿ, ಚಿಂಚಲಿ, ರಾಯಬಾಗ, ನಸಲಾಪೂರ, ಅಂಕಲಿ. ಹಿರೇಕೋಡಿ ಚಿಂಚಣಿ, ಕರೋಶಿ, ಕರಗಾಂವಿ, ನಿಪ್ಪಾಣಿ, ಸಾಂವಗಾಂವ, ಈಚಲಕರಂಜಿ, ಜಯಸಿಂಗಪೂರ, ಕರ್ನಾಳ, ಖಂಡೇರಾಜೂರಿ, ಮಧಬಾವಿ, ಮಾಲಗಾಂವಿ ಖೀಳೆಗಾಂವಿ ಸಂಕೋನಟ್ಟಿ, ಘಟನಟ್ಟಿ ರಡ್ಡೇರಹಟ್ಟಿ, ಹೈದರಾಬಾದ, ಮುಂಬಯಿ ಮಹಾನಗರಗಳಲ್ಲಿ ಹೀಗೆ ಕರ್ನಾಟಕ ಹಾಗೂ ಮಹಾರಾಷ್ಟ್ರದ ಅನೇಕ ಕಡೆ ವಿಷ್ಣು ಕಂಚಗಾರನ ಕಣಿ ಕುಣಿದು ಜನಮನದ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಕಲಾವಿದರಾಗಿ ವಿಷ್ಣು ಕಂಚಗಾರ

ಇದು 1964ರಲ್ಲಿ ಅಥಣಿ ತಾಲ್ಲೂಕಿನ ಸವದಿಯಲ್ಲಿ ನಡೆದ ಘಟನೆ. ಸವದಿಯ ಶ್ರೀ ಮಾರುತಿ ದೇವರ ಓಕುಳಿಯ ಉತ್ಸವದ ನಿಮಿತ್ತವಾಗಿ ಶಿವಮೂರ್ತಯ್ಯ ಹಿರೇಮಠ ಹಾಗೂ ಗೂಳಪ್ಪ ಸವದಿ ಅವರು ವೀಳ್ಯೆವು ಕೊಟ್ಟು ನನ್ನ ಹಾಗೂ ಭೀಮನಗೌಡ ಪಾಟೀಲ ಸಾ॥ ಅರಳಿಮಟ್ಟಿ ತಾ॥ ಗೋಕಾಕರ ಇವರ ಕಣಿಮಜಲಿನ ಕಾರ್ಯಕ್ರಮದ ದಿನಾಂಕವನ್ನು ಗೊತ್ತುಪಡಿಸಿದ್ದರು. ರಾತ್ರಿ 10 ರಿಂದ ಮುಂಜಾನೆ 7ರವರೆಗೆ ಕಲಾಪ್ರದರ್ಶನ ಮಾಡಲು ತಿಳಿಸಿದ್ದರು. ನಾವು ಅದಕ್ಕೆ ಒಪ್ಪಿಕೊಂಡಿದ್ದೆವು.

ಆದರೆ ಅದರ ಮುನ್ನಾ ದಿನ ಹುಕ್ಕೇರಿ ತಾಲ್ಲೂಕಿನ ಹುಲ್ಲೋಳಿ ಗ್ರಾಮದಲ್ಲಿ ಮದುವೆ ನಿಮಿತ್ತ ಕಣಿಮಜಲಿನ ಕಾರ್ಯಕ್ರಮಕ್ಕೆ ಬರಬೇಕಾಗಿತ್ತು. ಆ ಪ್ರಕಾರ ಹುಲ್ಲೋಳಿಗೆ ಬಂದು ಕಾರ್ಯಕ್ರಮ ನೀಡಿ ಅಲ್ಲಿಂದ ಮುಂಜಾನೆ ಬೇಗನೆ ಹೋಗಬೇಕಾಗಿತ್ತು. ಆದರೆ ಅಂದಿನ ಮಾಜಿ ಪ್ರಧಾನಿ ಜವಾಹರಲಾಲ ನೆಹರೂ ಅವರ ಆಕಸ್ಮಿಕ ಮರಣದ ಸುದ್ದಿ ದಿಢೀರನೆ ಹಬ್ಬಿ ಎಲ್ಲ ಜನತೆಗೆ ಆಘಾತವಾಯಿತಲ್ಲದೆ, ವಾಹನಗಳ

ಸಂಚಾರವು ಸ್ಥಗಿತಗೊಂಡಿತು. ಕಾರಣ ಅಲ್ಲಿಂದ ನಾವು ಸವದಿಗೆ ಹೋಗಲು, ಅತಿ ತ್ರಾಸದಿಂದ ನಡೆಯುತ್ತ ಎಲ್ಲ ತಂಡದ ಸದಸ್ಯರೊಂದಿಗೆ ಒಂದು ಗಂಟೆಯ ವೇಳೆಗೆ ಘಟಪ್ರಭಾ ಸ್ಟೇಷನ್ನಕ್ಕೆ ತಲುಪಿದೆವು. ಆ ವೇಳೆಗೆ 12 ಗಂಟೆಯ ಟ್ರೇನು ಪಾಸಾಗಿತ್ತು. ಮುಂದೆ ಸಾಯಂಕಾಲ 7 ಗಂಟೆಯವರೆಗೆ ಯಾವ ವಾಹನದ ಸೌಕರ್ಯವಾಗಲಿಲ್ಲ. ಅನಿವಾರ್ಯವಾಗಿ ಸಾಯಂಕಾಲ 7 ಗಂಟೆಯ ಟ್ರೇನನ್ನು ಹಿಡಿದು 8 ಗಂಟೆಗೆ ಕುಡುಚಿ ಸ್ಟೇಶನ್ ತಲುಪಿದೆವು. ಅಲ್ಲಿಂದ ರಬಕವಿಗೆ ಹೋಗಲು ಬಸ್ಸಿನ ಸೌಕರ್ಯ ಇಲ್ಲದ್ದರಿಂದ ಕಟ್ಟಿಗೆ ತುಂಬಿದ್ದ ಟ್ರಕ್ಕು ಹಿಡಿದುಕೊಂಡು ರಬಕವಿಗೆ ರಾತ್ರಿ ಪ್ರಯಾಣ ಮಾಡುವ ಪ್ರಸಂಗ ಒದಗಿತು. ಅಲ್ಲಿಂದ ಹೊಳೆ ದಾಟುವ ಸಲುವಾಗಿ (ಕೃಷ್ಣಾನದಿ) ಅಕ್ಕಿ ಹೋಗಲು ಒಂದು ಟ್ಯಾಕ್ಸಿ ಮಾಡಿಕೊಂಡು ತಲುಪಿದಾಗ ರಾತ್ರಿ 10 ಗಂಟೆ ಆಗಿತ್ತು. ಆ ವೇಳೆಗೆ ಸವದಿ ಗ್ರಾಮದವರು ನಮ್ಮ ಸಲುವಾಗಿ ಕಳುಹಿಸಿದ ಎತ್ತಿನಗಾಡಿಯವರು ನಮ್ಮ ದಾರಿ ಕಾಯ್ದು ನಿರಾಶರಾಗಿ ಖಾಲಿ ಬಂಡಿಯೊಂದಿಗೆ ಸವದಿಗೆ ಹೋಗಿದ್ದರು. ಆಗ ಮಹೇಶವಾಡಿಯಲ್ಲಿ ನಮ್ಮ ಪರಿಚಯದವರಾದ ಅಣ್ಣಪ್ಪ ಬಡಿಗೇರ ಅವರ ಮುಖಾಂತರ ಬೇರೆ ಚಕ್ಕಡಿಗಾಡಿ ಮಾಡಿಕೊಂಡು ಸವದಿ ತಲುಪಿದಾಗ ರಾತ್ರಿ 12 ಗಂಟೆ ಆಗಿತ್ತು.

ಅಷ್ಟರಲ್ಲಿ ಅರಳಿಮಟ್ಟಿಯ ಭೀಮಗೌಡ ಪಾಟೀಲ ಅವರು ಸಮಯಕ್ಕೆ ಸರಿಯಾಗಿ ಬಂದು ತಮ್ಮ ಕಾರ್ಯಕ್ರಮ ಪ್ರದರ್ಶಿಸಿ ಜನರಿಂದ ಶಬ್ಬಾಶ್‌ಗಿರಿ ಪಡೆದಿದ್ದರು. ನಾವು ವೇಳೆಗೆ ಸರಿಯಾಗಿ ತಲುಪಾದ ಕಾರಣ ಕೂಡಿದ ಎಲ್ಲ ಜನರು ನಿರಾಶೆಯಿಂದ ಅನೇಕ ರೀತಿಯಿಂದ ತಮ್ಮ ತಮ್ಮೊಳಗೆ ಮಾತನಾಡ ತೊಡಗಿದ್ದರು. ನಾವು ಹೋದ ತಕ್ಷಣ ನೆರೆದ ಜನ ಸಂತೋಷಗೊಂಡರು. ಅದೇ ಉಲ್ಲಾಸದಲ್ಲಿ ನಾವು ತಿಂಡಿ ತಿನಿಸು ವಿಚಾರಿಸದೆ, ಅರ್ಧಗಂಟೆಯಲ್ಲಿ

ತಯಾರಾಗಿ 12–30ಕ್ಕೆ ಕಾರ್ಯಕ್ರಮ ಆರಂಭಿಸಿದೆವು. ಸುಮಾರು ಮೂರು ತಾಸಿನವರೆಗೆ ಕಲಾಪ್ರದರ್ಶನ ಮಾಡಿದೆವು. ನೆರೆದ ಜನ ಚಪ್ಪಾಳೆ ತಟ್ಟಿ, ಕುಣಿದು ಕುಪ್ಪಳಿಸಿದರು. ಅಲ್ಲಿಯ ಹಿರಿಯ ಕಲಾವಿದರಾದ ಶ್ರೀ ವೇದಮೂರ್ತಿ ಮಲ್ಲಯ್ಯ ಸ್ವಾಮಿಗಳವರು ಶ್ರೀಕೃಷ್ಣ ಪಾರಿಜಾತ ಕಂಪನಿಯುನ್ನು ಸುವಾರು ಐವತ್ತು ವರ್ಷಗಳಿಂದ ನಡೆಸಿಕೊಂಡು ಬಂದ ಮಹಾನ್ ಕಲಾವಿದರು. ಅವರು ನಮ್ಮ ತಂಡವನ್ನು ಒಳ್ಳೆಯ ರೀತಿಯಿಂದ ಗೌರವಿಸಿ ಸತ್ಕರಿಸಿದರು. ಅಲ್ಲದೆ ಕಲಾಪ್ರೇಮಿಗಳಾದ ಅವರು ನಮ್ಮ ಉಳಿದ ಕಲಾವಿದರೊಂದಿಗೆ ಶ್ರೀ ಭೀಮನಗೌಡ ಪಾಟೀಲ ಅವರು ಸೇರಿಕೊಂಡು ಕಣಿ ವಾದ್ಯ ನುಡಿಸಬೇಕೆಂದೂ ಶ್ರೀ ವೇದಮೂರ್ತಿ ಮಲ್ಲಯ್ಯ ಸ್ವಾಮಿಗಳು ಪ್ರಚೋದನೆ ನೀಡಿದರು. ಅದು ಎಲ್ಲ ಜನರ ಮೆಚ್ಚಿಗೆಗೆ ಪಾತ್ರವಾಯಿತು. ಹೀಗಾಗಿ ನಾವು ಅನುಭವಿಸಿದ ನೋವು–ಸಂಕಟಗಳು ತತ್ಕಾಲದಲ್ಲಿ ಪರಿಹಾರವಾದವು.

ಪ್ರತಿ ವರ್ಷ ಜಮಖಂಡಿ ತಾಲ್ಲೂಕಿನ ತೇರದಾಳದಲ್ಲಿ ಕಾರಹುಣ್ಣಿಮೆಯ ನಿಮಿತ್ತ ಎತ್ತಿನ ಮೆರವಣಿಗೆ ಅದ್ಧೂರಿಯಿಂದ ನಡೆಯುತ್ತಿತ್ತು. ಸುತ್ತಲಿನ ಗ್ರಾಮದ ನಾಗರೀಕರು ಮೆರವಣಿಗೆ ನೋಡಲು ಆಗಮಿಸುತ್ತಿದ್ದರು. ಅದೇ ಸಂದರ್ಭದಲ್ಲಿ ಕಣಿಮೇಳ ಪ್ರದರ್ಶನ ಏರ್ಪಡಿಸುವ ಸಂಪ್ರದಾಯವೂ ಅಲ್ಲಿತ್ತು. ಹೀಗಾಗಿ ಅಪರೂಪದ ಕಣಿ ಕಲಾವಿದನಾದ ವಿಷ್ಣು ಕಂಚಗಾರ ಅವರ ತಂಡಕ್ಕೆ ವೀಳ್ಯವ ಇತ್ತು ಆಮಂತ್ರಿಸಿದ್ದರು. ಆ ಆಮಂತ್ರಣದ ಮೇರೆಗೆ ತೇರದಾಳಕ್ಕೆ ಹೋಗಿ ಅಲ್ಲಿ ಕಣಿವಾದ್ಯ ಪ್ರದರ್ಶನ ಮಾಡಿ ಜನರ ಮೆಚ್ಚಿಗೆ ಪಡೆಯುವಲ್ಲಿ ಯಶಸ್ವಿಯಾದರು. ಮುಂದೆ ಮರುದಿನ ಅಥಣಿ ತಾಲ್ಲೂಕಿನ ನಂದಗಾಂವ ಗ್ರಾಮದಲ್ಲಿ ಕಣಿಪ್ರದರ್ಶನಕ್ಕೆ ಒಪ್ಪಂದವು ಆಗಿತ್ತು. ಆ ಒಪ್ಪಂದದ ಮೇರೆಗೆ

ತೇರದಾಳದಿಂದ ಸಂತಿ ಊರಿಗೆ ಹೋಗಬೇಕಾಗಿತ್ತು. ಅಲ್ಲಿಗೆ ಹೋಗಲು ಬಸ್ಸಿನ ಸೌಕರ್ಯವಿರಲಿಲ್ಲ. ಹೇಗೋ ಕಷ್ಟಪಟ್ಟು ಸಾಯಂಕಾಲ ಬಾಡಿಗೆ ಪಡೆದ ಸೈಕಲ್ ಮೇಲಿಂದ ಸಂತಿ ಊರು ತಲುಪಿದಾಗ ರಾತ್ರಿ ಆಗಿತ್ತು. ಮೇಲಾಗಿ ಸಂತಿ ಊರಿಂದ ಹೊಳೆಯನ್ನು ದಾಟಿ ನಂದಗಾಂವಕ್ಕೆ ಹೋಗಬೇಕಾಗಿತ್ತು. ಬೋಟಿನ ಸಹಾಯವಿಲ್ಲದೆ ಹೊಳೆ ದಾಟಲು ಸಾಧ್ಯವಿರಲಿಲ್ಲ. ಹೀಗಾಗಿ ಬೋಟು ತಿರುಗಿ ಬರುವುದಕ್ಕೆ ವಿಳಂಬವಾಗಿದ್ದರಿಂದ ಅಂದು ನಂದಗಾಂವದಲ್ಲಿ ನಡೆಯಬೇಕಾಗಿದ್ದ. ಕಣಿವಾದ್ಯ ಪ್ರದರ್ಶನವು ನಡೆಯಲಿಲ್ಲ. ಹೀಗಾಗಿ ವಿಷ್ಣು ಅವರ ತಂಡಕ್ಕೆ ತುಂಬಾ ನಿರಾಶೆ ಆಯಿತು. ಆದಾಗ್ಯೂ ಅಲ್ಲಿಯ ಪ್ರಮುಖ ಕಲಾಕಾರರಾದ ಬಾಹುಬಲಿ ಕಾಗವಾಡ, ಗುಂಡಪ್ಪ ಹಳಿಂಗಳಿ, ಮಲ್ಲಪ್ಪ ತೇಲಿ ಮುಂತಾದ ಮಹನೀಯರು ನಮ್ಮ ತಂಡವನ್ನು ಪ್ರೀತಿ-ವಿಶ್ವಾಸದಿಂದ ನೋಡಿಕೊಳ್ಳುತ್ತ ಬಂದಿದ್ದಾರೆ. ಅವರ ಪ್ರೀತಿಗೆ ನಮ್ಮ ತಂಡವು ಋಣಿಯಾಗಿದೆ.

ವಿಷ್ಣು ಅವರು ತರಬೇತಿ ನೀಡಿದ ತಂಡಗಳು

1. ಚಿಕ್ಕಪಡಸಲಗಿ ತಾ॥ ಜಮಖಂಡಿ ಕರಡಿಮೇಳ ತಂಡ ಮಹಾದೇವ ಹೂವಣ್ಣ ಕಲ್ಯಾಣಿ ತಂಡದ ಮುಖ್ಯಸ್ಥರು

2. ಸಂಕ್ರಟ್ಟಿ ತಾ॥ ಅಥಣಿ ಕರಡಿಮೇಳ ತಂಡ ಜಿನ್ನಪ್ಪ ಭುಜಬಲಿ ಬೊಸಗಿ, ತಂಡದ ಮುಖ್ಯಸ್ಥರು

3. ಸಪ್ತಸಾಗರ ತಾ॥ ಅಥಣಿ ಕರಡಿಮೇಳ ತಂಡ ಕಲ್ಲಪ್ಪ, ನಿಂಗಪ್ಪ ಹೊಸೂರ, ತಂಡದ ಮುಖ್ಯಸ್ಥರು

4. ಮುತ್ತೂರ ತಾ॥ ಜಮಖಂಡಿ ಕೈ ಪೆಟ್ಟುಮೇಳ (ಡೊಳ್ಳು) ಮಹಾಲಿಂಗಪ್ಪ ನಿಂಗಪ್ಪ ದನಗರ, ತಂಡದ ಮುಖ್ಯಸ್ಥರು.

5. ಕಂಕನವಾಡಿ ತಾ॥ ಜಮಖಂಡಿ ಕರಡಿಮೇಳ ತಂಡ ಮಹಾದೇವ ಹುದ್ದಾರ, ತಂಡದ ಮುಖ್ಯಸ್ಥರು

ವಿಷ್ಣು ಅವರು ಕಣಿ ಕುಣಿಸಿದ ಪ್ರಮುಖ ಸ್ಥಳಗಳು :

1980ರಲ್ಲಿ ಗದಗದಲ್ಲಿ ನಡೆದ ಏಳನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ. 1981ರಲ್ಲಿ ಬೆಳಗಾವಿಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನ, 1982ರಲ್ಲಿ ಮೈಸೂರು ದಸರಾ ಉತ್ಸವ, 1983ರಲ್ಲಿ ಬಿಜಾಪೂರ ಜಿಲ್ಲಾ ದಿನ ಉತ್ಸವ, 1986ರಲ್ಲಿ ಸವದತ್ತಿ ನವರಾತ್ರಿ ಉತ್ಸವ, 1988ರಲ್ಲಿ ಅತಣಿಯಲ್ಲಿ ಜರುಗಿದ ರಾಜ್ಯ ಮಟ್ಟದ ಕಲಾ ಮಹೋತ್ಸವ. 1990ರಲ್ಲಿ ಹುಬ್ಬಳ್ಳಿ ಅಖಿಲ ಕನಾಟಕ ಜಾನಪದ ಚರ್ಮವಾದ್ಯ ಕಲಾಮೇಳ, 1998ರಲ್ಲಿ ಬೆಳಗಾವಿ ಜರಗಿದ ಭಾರತ ಸ್ವಾತಂತ್ರ ಸುವರ್ಣ ಮಹೋತ್ಸವ, 2002 ರಲ್ಲಿ ದೂರದರ್ಶನ ಕೇಂದ್ರ ಬೆಂಗಳೂರು 2003ರಲ್ಲಿ ಗಡಿನಾಡ ಉತ್ಸವ ನಿಪ್ಪಾಣಿ 2005ರಲ್ಲಿ ಮಧುರ ಖಂಡಿ (ತಾ॥ ಜಮಖಂಡಿ)ಯಲ್ಲಿ ಜರುಗಿದ ಶ್ರೀ ಮಹಾಲಕ್ಷ್ಮೀ ಜಾತ್ರಾ ಮಹೋತ್ಸವದಲ್ಲಿ ಕಣಿ ಧ್ವನಿ ನುಡಿಸಿ ಜನಮನದ ಗೌರವಕ್ಕೆ ಪಾತ್ರರಾಗಿದ್ದಾರೆ. ಅದೇ ರೀತಿ 2006ರಲ್ಲಿ ಬೆಳಗಾವಿಯಲ್ಲಿ ಜರುಗಿದ ಸುವರ್ಣ ಸಂಸ್ಕೃತಿ ದಿಬ್ಬಣ. 2007ರಲ್ಲಿ ರಾಮನಗರದಲ್ಲಿ ಜರುಗಿದ ಜಾನಪದ ಲೋಕ, 2008ರಲ್ಲಿ ಹಾರೂಗೇರಿಯಲ್ಲಿ ಜರುಗಿದ ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ಬೆಳಗಾವಿ ಜಿಲ್ಲಾ ಐದನೈದು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಷ್ಣುರವರು ಕಣಿನುಡಿ ಸೇವೆ ಸಲ್ಲಿಸಿ ಇಡೀ ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯದ ಜನಮನವನ್ನು ಗೆದ್ದಿದ್ದಾರೆ ಹೀಗೆ ಹಲವು ಹತ್ತುಕಡೆಗೆ ತಮ್ಮ ಕಣಿಧ್ವನಿ ನುಡಿ ಸೇವೆಸಲ್ಲಿಸಿ ಆ ಕಲೆಯ ಉಳಿವಿಗಾಗಿ ಶ್ರಮಿಸಿದ್ದಾರೆ. ಅವರು ಈಗಲೂ ಕಣಿನುಡಿ ಸುತ್ತಿರುವುದಾದರೆ ಅದು ಅವರ ಆತ್ಮ ತೃಪ್ತಿಗಾಗಿ ಮಾತ್ರ, ಅವರಲ್ಲಿ,

ಕಲೆಯನ್ನು ಗುರುತಿಸಿ ರಾಜ್ಯದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು. 1991 ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಜೊತೆಗೆ ಅದು ಹೊರಡಿಸಿದ 'ಜಾನಪದ ಅಕಾಡೆಮಿ ಪ್ರಶಸ್ತಿ ವಿಜೇತರು' ಎಂಬ ಚಿಕ್ಕ ಪುಸ್ತಕದಲ್ಲಿ ಅವರ ಭಾವಚಿತ್ರದೊಂದಿಗೆ ಪರಿಚಯ ಲೇಖನ ಪ್ರಕಟಿಸಿದೆ.

ಮಾಸಾಶನ :

ಕರ್ನಾಟಕ ರಾಜ್ಯ ಸರ್ಕಾರವು 1–4–1997 ರಿಂದ ಮಾಸಾಶನ ಮಂಜೂರ ಮಾಡಿದ್ದು. ಮೊದಲಿಗೆ 250 ರಿಂದ ಆರಂಭವಾದ ಮಾಸಾಶನ ಈಗ ಪ್ರತಿ ತಿಂಗಳಿಗೆ 1000 ರೂಪಾಯಿ ಲಭಿಸುತ್ತಿದೆ. ಅಲ್ಲದೆ ಕೇಂದ್ರ ಸರ್ಕಾರವು ಕಲಾವಿದರಿಗೆ ಪ್ರೋತ್ಸಾಹವಾಗಿ ಕೊಡುವ ಮಾಸಾಶನ ಪ್ರತಿ ತಿಂಗಳು 2000 ರೂ. ಮಂಜೂರು ಮಾಡಿದೆ.

ಹಿರಿಯ ಸಾಧನೆಗೆ ಮೆಚ್ಚಿಗೆ :

ಶ್ರೀ ವಿಷ್ಣು ಕಂಚಗಾರ ಅವರು ತಮ್ಮ ಬದುಕಿನ ಕಾಲಾವಧಿಯಲ್ಲಿ ಗೈದ ಹಿರಿಯ ಸಾದನೆಯನ್ನು ಮೆಚ್ಚಿ ನಾಡಿನ ಅನೇಕ ವಿದ್ವಾಂಸರು ಪ್ರಶಂಸಿಸಿದ್ದಾರೆ. 1962 ರಲ್ಲಿ ಮುಂಬಯಿಯಲ್ಲಿ ಜರುಗಿದ ಅಖಿಲ ಭಾರತ ಸೇವಾದಳದ ಮಹಾ ಶಿಬಿರಕ್ಕೆ ನಾ. ಸು. ಹರ್ಡೇಕರ ಅವರೊಂದಿಗೆ ವಿಷ್ಣು ಕಂಚಗಾರ ಹೋಗಿದ್ದರು. ಅಲ್ಲಿ ಕಣಿವಾದನ ಮೂಲಕ ವಿಷ್ಣು ಭಾರತದ ಮೊದಲ ಪ್ರಧಾನಿ ಜವಾಹರಲಾಲ ನೆಹರು ಅವರ ಮೆಚ್ಚುಗೆ ಗಳಿಸಿದರು. 1991 ರಲ್ಲಿ ಸನ್ಮಾನ್ಯ ಶ್ರೀ ಜೆ. ಎಚ್. ಪಟೇಲ್ (ಸಚಿವರು) ಹಾಗೂ ಜಿ. ಎಸ್. ಪರಮ ಶಿವಯ್ಯನವರಿಂದ ಮೆಚ್ಚಿಗೆ ಪಡೆದರು. ಶ್ರೀ ರಾಮಣ್ಣ ಕಲೂತಿ, ಶಾಸಕರು ಜಮಖಂಡಿ, ಪ್ರೊ. ಜ್ಯೋತಿ ಹೊಸೂರು. ಡಾ. ಶಾಲಿನಿ ರಘುನಾಥ, ಡಾ. ಬಸವರಾಜ ಮಲಶೆಟ್ಟಿ ಡಾ.

ಶ್ರೀರಾಮ ಇಟ್ಟಣ್ಣವರ, ಡಾ. ಚಕ್ಕೆರೆ ಶಿವಶಂಕರ್, ಡಾ.ಎಂ.ಎನ್. ವಾಲಿ, ಡಾ. ಸಂಗಮೇಶ ಬಿರಾದಾರ, ಪ್ರೊ. ಡಿ. ಲಿಂಗಯ್ಯ ಡಾ. ಸಿ.ಕೆ. ನಾವಲಗಿ, ಡಾ. ವಿ.ಎಸ್. ಮೌಳಿ, ಡಾ. ಅಶೋಕ ನರೋಡೆ, ಪ್ರಕಾಶ ಕೋಟಿನತೋಟ ಮುಂತಾದ ವಿದ್ವಾಂಸರು ಈ ಹಿರಿಯ ಕಲಾವಿದರ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.


ಅದೇ ರೀತಿ ಹಾರೂಗೇರಿ ಹಾಗೂ ಸುತ್ತ ಮುತ್ತಲಿನ ಗ್ರಾಮದ ಕಲಾ ಆಸಕ್ತರಾದ ರಾಯಪ್ಪ ಬಂತಿ, ಭಗವಂತಪ್ಪ ಪತ್ತಾರ, ಬಿ.ಎ. ಸನದಿ. ಬಿ. ಆರ್. ದರೂರ, ಬಿ. ಆರ್. ಆಜೂರೆ, ಡಿ.ಬಿ. ಪತ್ತಾರ, ಸಿದ್ಧಪ್ಪ ಭಾಸ್ಕರ, ಶಿದ್ರಾಮಪ್ಪ ಗಲಗಲಿ, ಸುಭಾಸ ಅಲಕನೂರು ಚನ್ನಪ್ಪ ಖಡಕಬಾವಿ (ಹಿಡಕಲ್) ರಾಮಣ್ಣ ಮೋಕಾಸಿ, ಬಸಗೌಡ ಪಾಟೀಲ, ಬಸಪ್ಪ ಸಾವಂತ್ರಿ, ಗಿರಿಯಪ್ಪ ಸಾವಂತ್ರಿ, ಚನ್ನಯ್ಯ ಮಠಪತಿ, ಬಾಳಯ್ಯ ಮಠಪತಿ, ನಾಗಪ್ಪ ಮೋಕಾಸಿ. ಶಿವಲಿಂಗಯ್ಯ ಮಠಪತಿ, ಬಾಳಪ್ಪ ದಾನಗೌಡರ, ಮಹಾದೇವಯ್ಯ ಬಬಲಾದಿ ಮಠ ಮುಂತಾದವರನ್ನು ಹೆಸರಿಸಬಹುದು

ಸಮಾರೋಪ

ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಜನಪದ ಪ್ರಕಾಗಳಾದ ಹಾಡು - ಕೀರ್ತನೆ, ಕೋಲಾಟ, ಬಯಲಾಟ, ಲಾವಣಿಪದಗಳು. ಕಣಿ ಮೇಳಗಳು, ಕರಡಿಮಜಲು, ಸೋಗಿನ ವೇಷಗಳು. ಪಾರಿಜಾತ ಪರಂಪರೆ ಮುಂತಾದವು ಉಪೇಕ್ಷೆಣೆಗೆ ಒಳಗಾಗುತ್ತಿವೆ. ಜನಪದ ಕಲೆಗಳು, ಕಲಾವಿದರು ಮೂಲೆಗುಂಪಾಗಿ ನಮ್ಮ ಸಾಂಸ್ಕೃತಿಕ ಸಂಪತ್ತು ಕ್ಷೀಣಿಸುತ್ತಿದೆ. ಇಂಥ ಸಂದರ್ಭದಲ್ಲಿ ಕಲೆಯ ಉಳಿವಿಗಾಗಿ ಬದುಕನ್ನು ಮೀಸಲಿಟ್ಟಿರುವ ಹಾರೂಗೇರಿಯ ವಿಷ್ಣು ಕಂಚಗಾರ ಅಪರೂಪದ ಕಲಾವಿದ. ಈ ಕಲಾವಿದನ ಪ್ರತಿಭೆಯನ್ನು ಗುರುತಿಸುವುದು ಸಮಾಜದ, ಸರಕಾರದ ಆದ್ಯ ಕರ್ತವ್ಯ, ಕಣಿವಾದನ ಕಲೆಯಲ್ಲಿ ಇಲ್ಲಿನ ಕಂಚಗಾರ ಮನೆತನದ ಕೊನೆಯ ತೆನೆಯಾಗಿರುವ ವಿಷ್ಣುವಿಗೆ ಸರಕಾರ ಸೂಕ್ತ ಗೌರವ ನೀಡುವುದು ಅವಶ್ಯ.

ವಂಶಾವಳಿ


ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ತೊರಗಲ್ಲು




ಅನುಬಂಧ–೨



ಶ್ರೀ ವಿಷ್ಣು ಪರಸಪ್ಪ ಕಂಚಗಾರ ಅವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ಅವರು 1991ನೇ ಸಾಲಿನಲ್ಲಿ ನೀಡಿದ ಗೌರವ ಪ್ರಶಸ್ತಿ. ಸನ್ಮಾನ್ಯ ಶ್ರೀ ಜೆ. ಎಚ್. ಪಟೇಲ್ ಸಚಿವರು ಹಾಗೂ ಶ್ರೀ ಜಿ. ಎಸ್. ಪರಮಶಿವಯ್ಯನವರು ಅಧ್ಯಕ್ಷರು ಜಾನಪದ ಅಕಾಡೆಮಿ ಪ್ರಶಸ್ತಿ ಪ್ರಧಾನ ಮಾಡುತ್ತಿರುವುದು.



12–7–2009 ರಂದು ದೂರದರ್ಶನ ಕೇಂದ್ರ, ಬೆಂಗಳೂರು ಕಾರ್ಯಕ್ರಮ ರಿಕಾರ್ಡಿಂಗ್ ಸಂದರ್ಭದಲ್ಲಿ ಶ್ರೀ ವಿಷ್ಣು ಕಂಚಗಾರ ಅವರು ಸಂಗಡಿಗರೊಂದಿಗೆ ವಿಧಾನಸೌಧದ ಮುಂಭಾಗದಲ್ಲಿ ಕಣೆವಾದನ ನುಡಿಸುತ್ತಿರುವುದು



18–2–2004 ರಂದು ಜಮಖಂಡಿಯಲ್ಲಿ ಜರುಗಿದ ಜಾನಪದ ಕಲಾಮೇಳದಲ್ಲಿ ಕಣಿವಾದನ ಪ್ರಾತ್ಯಕ್ಷಿತೆ ಕಾರ್ಯಕ್ರಮದಲ್ಲಿ ಶ್ರೀ ರಾಮಣ್ಣ ಕಲೂತಿ, ಶಾಸಕರು ಜಮಖಂಡಿ ಅವರಿಂದ ಸನ್ಮಾನಿತರು

ಆಕರಗಳು :

೧. ಖ್ಯಾತ ಕಣಿವಾದಕ ವಿಷ್ಣು ಕಂಚಗಾರ
– ಕಲ್ಲೇಶ ಕುಂಬಾರ, ಸಂಯುಕ್ತ ಕರ್ನಾಟಕ ೩–೧೦–೧೯೯೩

೨. ಕನ್ನಡ ಕಣಿಗಾರ ವಿಷ್ಣು ಕಂಚಗಾರ
– ವಿ. ಎಸ್. ಮಾಳಿ, ಕರ್ಮವೀರ, ೧–೧೨–೨೦೦೨

೩. ಅಪರೂಪದ ಕಣಿವಾದಕ ವಿಷ್ಣು ಕಂಚಗಾರ
– ಡಾ. ವಿ. ಎಸ್ ಮಾಳಿ, ಹಾರೂಗೇರಿ,
ಸಂಯುಕ್ತ ಕರ್ನಾಟಕ, ೨೪–೮–೨೦೦೨

೪. ವಿಷ್ಣು ಕಂಚಗಾರರೊಂದಿಗೆ ಸಂದರ್ಶನ
ಸಂದರ್ಶಕರು : ಡಾ. ರಾಜಶೇಖರ ಇಚ್ಚಂಗಿ
೧೦–೬–೨೦೦೯ ಹಾಗೂ ೧೨–೭–೨೦೧೦

೫. ಬೆಳಗಾವಿ ಜಿಲ್ಲೆಯ ಸಾಹಿತ್ಯದರ್ಶನ
ಸಂ. ಡಾ. ಪಿ.ಜಿ. ಕೆಂಪಣ್ಣವರ

ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಹಾರೋಗೇರಿಯ ವಿಷ್ಣು ಪರಸಪ್ಪ ಕಂಚಗಾರ ಅವರು ಕಣಿ ವಾದ್ಯ ವಾದನದಲ್ಲಿ ನಿಷ್ಣಾತರು. ವಂಶ ಪಾರಂಪರ್ಯವಾಗಿ ಬಂದ ಈ ಕಲೆಯನ್ನು ಅತ್ಯಂತ ಶ್ರದ್ಧೆಯಿಂದ ಉಳಿಸಿ ಬೆಳೆಸಿಕೊಂಡು ಬಂದಿರುವುದಲ್ಲದೆ, ತಮ್ಮ ಸುತ್ತಮುತ್ತಲಿನ ಕಿರಿಯರಿಗೂ ಕಲಿಸುವುದರ ಮೂಲಕ ಕಲೆಯ ಪ್ರಸರಣಕ್ಕೆ ಕಾರಣರಾಗಿದ್ದಾರೆ. ಕನ್ನಡ ನಾಡಿನುದ್ದಕ್ಕೂ ಕಾರ್ಯಕ್ರಮ ನೀಡಿ ಜನ ಸಮುದಾಯದ ಮೆಚ್ಚುಗೆಗೆ ಪಾತ್ರರಾಗಿರುವ ವಿಷ್ಣು ಕಂಚಗಾರರ ಬದುಕು ಮತ್ತು ಸಾಧನೆಯನ್ನು ಕುರಿತು ನಾಡಿನ ಪ್ರಸಿದ್ಧ ವಿದ್ವಾಂಸರಾದ ಡಾ. ರಾಜಶೇಖರ ಇಚ್ಚಂಗಿಯವರು ಸಮರ್ಥವಾಗಿ ಪರಿಚಯಿಸಿದ್ದಾರೆ.

-ಡಾ. ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು

ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು- ೫೬೦ ೦೫೪

E-mail : janapadaparishath@hotmail.com
Website : janpadaloka.org